**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:ಬಿಟಿಇ/01/ಇಸಿಎಸ್(1)/2013

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು -01
ದಿನಾಂಕ: 24-07-2013

**ಜ್ಞಾಪನ**

ವಿಷಯ: ತಾಂತ್ರಿಕ ಪರೀಕ್ಷಾ ಮಂಡಳಿಯ 2013 ಏ/ಮೇ ಸೆಮಿಸ್ಟರ್ ಪರೀಕ್ಷೆಯ ಮರುಮೌಲ್ಯಮಾಪನದ ಅರ್ಜಿಗಳನ್ನು ಆನ್‌ಲೈನ್ ನಲ್ಲಿ ಅಪ್‌ಡೇಟ್ ಮಾಡದಿರುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂ:ಬಿಟಿಇ:01/ಇಸಿಎಸ್(2)/2013 ದಿ:08-07-2013.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಪರೀಕ್ಷಾ ಮಂಡಳಿಯ 2013 ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶವನ್ನು ದಿ:12-07-2013 ರಂದು ಪ್ರಕಟಿಸಿ, ಮರುಮೌಲ್ಯಮಾಪನಕ್ಕೆ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಲು ದಿ: 13-07-2013 ರಿಂದ ದಿ:20-07-2013 ರವರೆಗೆ ಕಾಲಾವಧಿ ನಿಗದಿಪಡಿಸಿ ಸುತ್ತೋಲೆ ಹೊರಡಿಸಲಾಗಿತ್ತು. ಸಂಸ್ಥೆಗಳ ಪ್ರಾಚಾರ್ಯರು ನಿಗದಿತ ಕೊನೆ ದಿನಾಂಕದ ಸಂಜೆಯೊಳಗೆ ಮರುಮೌಲ್ಯಮಾಪನದ ಅರ್ಜಿಗಳ ವಿವರಗಳನ್ನು ಆನ್‌ಲೈನ್‌ನಲ್ಲಿ ಅಪ್‌ಡೇಟ್ ಮಾಡಬೇಕೆಂದು ತಿಳಿಸಲಾಗಿತ್ತು. ಹಾಗೂ ನಿಗದಿತ ಕಾಲಾವಧಿ ನಂತರ ಬರುವಂತಹ ಅರ್ಜಿಗಳು/ಅನ್‌ಲೈನ್‌ನಲ್ಲಿ ಅಪ್‌ಡೇಟ್ ಆಗದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲವೆಂದು ಸಹ ತಿಳಿಸಲಾಗಿತ್ತು.

ಆದಾಗ್ಯೂ ಹಲವಾರು ಸಂಸ್ಥೆಗಳು ನಿಗದಿತ ಕಾಲಾವಧಿಯಲ್ಲಿ ವಿದ್ಯಾರ್ಥಿಗಳ ಮರುಮೌಲ್ಯಮಾಪನದ ಅರ್ಜಿಗಳ ವಿವರಗಳನ್ನು ಆನ್‌ಲೈನ್ ನಲ್ಲಿ ಅಪ್‌ಡೇಟ್ ಮಾಡದಿರುವುದು ಕಂಡುಬಂದಿರುತ್ತದೆ. ಇದರಿಂದಾಗಿ ಮರುಮೌಲ್ಯಮಾಪನ ಕಾರ್ಯಕ್ಕೆ ಅಡಚಣೆಯುಂಟಾಗುತ್ತಿದೆ ಹಾಗೂ ವಿದ್ಯಾರ್ಥಿಗಳಿಗೂ ಸಹ ತೊಂದರೆಯಾಗುತ್ತಿದೆ.

ಈ ಸಂಬಂಧ ನಿಗದಿತ ಕಾಲಾವಧಿಯಲ್ಲಿ ವಿದ್ಯಾರ್ಥಿಗಳ ಮರುಮೌಲ್ಯಮಾಪನದ ಅರ್ಜಿಗಳ ವಿವರಗಳನ್ನು ಆನ್‌ಲೈನ್ ನಲ್ಲಿ ಅಪ್‌ಡೇಟ್ ಮಾಡದ ಸಂಸ್ಥೆಯ ಪ್ರಿನ್ಸಿಪಾಲರು, ಸರ್ಕಾರಿ ಆದೇಶದ ಪ್ರಕಾರ ರೂ.1000/- ದಂಡ ಶುಲ್ಕ ಪಾವತಿಸಿ ದಿನಾಂಕ 25-07-2013 ಸಂಜೆ 5.30 ರೊಳಗೆ ತಮ್ಮ ಸಂಸ್ಥೆಯಲ್ಲಿ ಬಿಟಿಇ ಲಿಂಕ್ಸ್ ಆನ್‌ಲೈನ್‌ನಲ್ಲಿ ಅಪ್‌ಡೇಟ್ ಮಾಡಿ ಮಂಡಳಿಗೆ ಮರುಮೌಲ್ಯಮಾಪನದ ಅರ್ಜಿಗಳನ್ನು ದಂಡ ಶುಲ್ಕ ಪಾವತಿಸದ ಚಲನ್ ಜೊತೆಗೆ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ. ದಂಡ ಶುಲ್ಕ ಪಾವತಿಸದ ಸಂಸ್ಥೆಯ ಅರ್ಜಿಗಳನ್ನು ಮರುಮೌಲ್ಯಮಾಪನಕ್ಕೆ ಪುರಸ್ಕರಿಸಲಾಗುವುದಿಲ್ಲ ಮತ್ತು ಮುಂದಿನ ಆಗುಹೋಗುಗಳಿಗೆ ಆಯಾ ಸಂಸ್ಥೆಯ ಪ್ರಿನ್ಸಿಪಾಲರುಗಳೇ ಹೊಣೆಗಾರರಾಗಿರುತ್ತಾರೆ ಎಂದು ತಿಳಿಸಲಾಗಿದೆ.

24/7
ಕಾರ್ಯದರ್ಶಿ

ಇವರಿಗೆ,
ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.

ಪ್ರತಿ:

1. ಇ – ಆಡಳಿತ
2. ಕಾರ್ಯದರ್ಶಿಯವರ ಆಪ್ತಶಾಖೆ
3. ಕಡತಕ್ಕೆ